# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ

ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)ಪಿ.ಆರ್/ 100 /2021-22. ದಿನಾಂಕ : 8/7/21

ದಿನಾಂಕ: 05-07-2021 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ: 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀ. ವೆನಕೇಶ್ ಆರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು 143 | 9480684415 |
| 3 | ಪಿ. ನರಸಿಂಹ | ಕಿರಿಯ ಆರೋಗ್ಯ ಪರಿವೀಕ್ಷಕರು | 9449153115 |
| 4 | ಗೋಪಾಲ | ಬೆಸ್ಕಾಂ ಅಭಿಯಂತರರು | |
| 5 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 6 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 7 | ಎಂ.ಎಂ.ವಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 8 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

ದಿನಾಂಕ: 05-07-2021 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲಿಗೆ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ ವೆಲ್‌ಫೇರ್ ಅಸೋಷಿಯೇಷನ್‌ನ ಶ್ರೀ. ಟಿ.ವಿ. ಜಯಕುಮಾರ್ ರವರು ಮಾತನಾಡಿ ಈ ಕೆಳಕಂಡ ವಿಷಯಗಳನ್ನು ಪ್ರಸ್ತಾಪಿಸಿ ಇವುಗಳ ಬಗ್ಗೆ ಸೂಕ್ತ ಕ್ರಮ ವಹಿಸಬೇಕೆಂದು ಸಭೆಗೆ ತಿಳಿಸಿದರು. ಅವುಗಳೆಂದರೆ.

Scanned by CamScanner

1. ರಾಮಯ್ಯಂಗಾರ್ ರಸ್ತೆಯ ಸುತ್ತಾಮುತ್ತಲಿನ ಪ್ರದೇಶದಲ್ಲಿ ಆಗಾಗ್ಗೆ ವಿದ್ಯುತ್ ಕಡಿತಗೊಳಿಸುತ್ತಿದ್ದು, ಇದರಿಂದಾಗಿ ತುಂಬಾ ತೊಂದರೆ ಉಂಟಾಗುತ್ತಿರುತ್ತದೆಂದು ತಿಳಿಸಿ ಈ ರೀತಿಯಾಗದಂತೆ ಸೂಕ್ತ ಕ್ರಮವಹಿಸಬೇಕೆಂದು ಕೋರಿದರು.
2. ಸಾರ್ವಜನಿಕರು ತಮ್ಮ ಮನೆಗಳಲ್ಲಿ ಉಪಯೋಗಿಸಿದ ಹಣ್ಣಿನ ಪದಾರ್ಥಗಳ ಕಸವನ್ನು ಬೀದಿ ದನಗಳಿಗೆ ತಿನ್ನಿಸಲು ರಸ್ತೆಗಳಿಗೆ ತಂದು ಸುರಿಯುತ್ತಿರುತ್ತಾರೆ. ಇದರಿಂದಾಗಿ ಬೀದಿ ದನಗಳ ಹಾವಳಿ ಹೆಚ್ಚಾಗುತ್ತಿದ್ದು, ಇದನ್ನು ತಡೆಗಟ್ಟಲು ಸೂಕ್ತ ಕ್ರಮ ವಹಿಸುವಂತೆ ಕೋರಿದರು.
3. ವಾರ್ಡ್ ವ್ಯಾಪ್ತಿಯ ಎಲ್.ಬಿ.ಎಫ್ ರಸ್ತೆಯಲ್ಲಿರುವ ಮಸೀದಿಯಲ್ಲಿ ಧ್ವನಿವರ್ಧಕಗಳನ್ನು ಉಪಯೋಗಿಸಿ ಪ್ರಾರ್ಥನೆ ಮಾಡುವುದರಿಂದ ಶಬ್ಧ ಮಾಲಿನ್ಯ ಉಂಟಾಗಿ ಇದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿರುತ್ತಿರುವುದಾಗಿ ತಿಳಿಸಿ ಇದನ್ನು ತಡೆಗಟ್ಟಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಕ್ರಮಕೈಗೊಳ್ಳಬೇಕೆಂದು ಕೋರಿದರು.
4. ವಾರ್ಡ್ ವ್ಯಾಪ್ತಿಯ ವಾಸವಿ ರಸ್ತೆಯಲ್ಲಿರುವ ಟ್ರಾಫಿಕ್ ಸಿಗ್ನಲ್‌ನಲ್ಲಿ ಮರದ ಕೊಂಬೆಗಳು ಬೆಳೆದು ಸಿಗ್ನಲ್ ದೀಪಗಳನ್ನು ಸರಿಯಾಗಿ ಕಾಣದಂತೆ ಮರೆ ಮಾಡಿರುತ್ತವೆ. ಇದರಿಂದ ಟ್ರಾಫಿಕ್ ನಿಯಮಗಳು ಉಲ್ಲಂಘನೆಯಾಗುತ್ತಿರುವುದಾಗಿ ತಿಳಿಸಿ ಬೆಳೆದ ಮರದ ಕೊಂಬೆಗಳನ್ನು ತೆರವುಗೊಳಿಸಿ ಟ್ರಾಫಿಕ್ ದೀಪಗಳು ಕಾಣುವಂತೆ ಮಾಡಬೇಕೆಂದು ಕೋರಿದರು.
5. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ –19 ಪ್ರಯುಕ್ತ ಲಸಿಕೆ ಅಭಿಯಾನ ನಡೆಯುತ್ತಿದ್ದು ಸರಿಯಾಗಿ ವ್ಯಾಕ್ಸಿನೇಷನ್ ದೊರೆಯುತ್ತಿರುವುದಿಲ್ಲ ಎಂದು ತಿಳಿಸಿ ಏಕೆ ಈ ರೀತಿಯಾಗುತ್ತಿದೆ ಮತ್ತು ಯಾವಾಗ ಇದು ಸರಿಯಾಗಿ ನಡೆಯುತ್ತದೆ ಎಂಬುದನ್ನು ತಿಳಿಸಬೇಕೆಂದು ಸಭೆಯಲ್ಲಿ ಕೋರಿದರು.

ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ ವೆಲ್‌ಫೇರ್ ಅಸೋಷಿಯೇಷನ್‌ನ ಶ್ರೀ. ಓ.ವಿ. ಜಯಕುಮಾರ್ ರವರು ಪ್ರಸ್ತಾಪಿಸಿದ ಈ ಮೇಲ್ಕಂಡ ವಿಷಯದ ಬಗ್ಗೆ ಚರ್ಚಿಸಲಾಗಿ ಕ್ರಮ ಸಂಖ್ಯೆ(1) ಕ್ಕೆ ಸಂಬಂಧಿಸಿದ ವಿಷಯವಾಗಿ ಸೂಕ್ತ ಕ್ರಮವಹಿಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು. ಕ್ರಮ ಸಂಖ್ಯೆ (2) ರ ವಿಷಯವಾಗಿ ಸೂಕ್ತ ಕ್ರಮ ವಹಿಸಲು ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು. ಕ್ರಮ ಸಂಖ್ಯೆ(3) ರ ವಿಷಯವಾಗಿ ಸೂಕ್ತ ಕ್ರಮ ವಹಿಸಲು ಕಲಾಸಿಪಾಳ್ಯ ಪೋಲೀಸ್ ರವರನ್ನು ಕೋರಲಾಗುವುದೆಂದು ನೋಡಲ್ ಅಧಿಕಾರಿಗಳು ತಿಳಿಸಿದರು. ಕ್ರಮ ಸಂಖ್ಯೆ(4) ರ ವಿಷಯವಾಗಿ ಸೂಕ್ತ ಕ್ರಮ ವಹಿಸಲು ಬಸವನಗುಡಿ ಟ್ರಾಫಿಕ್ ಪೋಲಿಸ್‌ರವರಿಗೆ ತಿಳಿಸಲಾಗುವುದೆಂದು ನೋಡಲ್ ಅಧಿಕಾರಿಗಳು ತಿಳಿಸಿದರು. ಮತ್ತು ಕ್ರಮ ಸಂಖ್ಯೆ (5) ರ ವಿಷಯವಾಗಿ ಸೂಕ್ತ ಮಾಹಿತಿಯನ್ನು ಒದಗಿಸಲು ಸಂಬಂಧಪಟ್ಟ ವೈದ್ಯಾಧಿಕಾರಿಯವರಿಗೆ ತಿಳಿಸಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ. ರಾಜು ರವರು ಮಾತನಾಡಿ ಎಂ.ಎನ್. ಕೃಷ್ಣರಾವ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಬೊಲಾರ್ಡ್ಸ್‌ಗಳನ್ನು ಅಳವಡಿಸುವ ಬಗ್ಗೆ ಈ ಹಿಂದಿನ ಸಭೆಗಳಲ್ಲಿ ಪ್ರಸ್ತಾಪಿಸಿದ್ದ ವಿಷಯವನ್ನು ಪುನಃ ಪ್ರಸ್ತಾಪಿಸಿ ಇವುಗಳನ್ನು ಅಳವಡಿಸುವ ಬಗ್ಗೆ ಖಚಿತವಾಗಿ ತಿಳಿಸಲು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಭಿಯಂತರರನ್ನು ಹಾಜರಾಗಲು ತಿಳಿಸಬೇಕೆಂದು ಕೋರಿದರು. ಈ ಬಗ್ಗೆ ಚರ್ಚಿಸಲಾಗಿ ಮುಂದಿನ ಸಮಿತಿ ಸಭೆಗೆ ಹಾಜರಾಗಲು ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಅಭಿಯಂತರರಿಗೆ ತಿಳಿಸಲಾಗುವುದೆಂದು ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು.

Scanned by CamScanner

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ. ರಾಜು ರವರು ಪುನಃ ಮಾತನಾಡಿ ವಾರ್ಡ್ ವ್ಯಾಪ್ತಿಯ ಅ.ನ.ಕೃಷ್ಣರಾವ್ ರಸ್ತೆಯಲ್ಲಿರುವ ಪಾದಚಾರಿ ಮಾರ್ಗದಲ್ಲಿ ನೂತನವಾಗಿ ಅಳವಡಿಸಲಾದ ಕಾಬಲ್‌ಸ್ಟೋನ್‌ಗಳು ಕುಸಿದಿದ್ದು ಇದರಿಂದಾಗಿ ಪಾದಚಾರಿಗಳಿಗೆ ತೊಂದರೆಯಾಗುತ್ತಿದ್ದು ಇದನ್ನು ಸರಿಪಡಿಸಬೇಕೆಂದು ಸಭೆಗೆ ತಿಳಿಸದರು. ಈ ಬಗ್ಗೆ ಚರ್ಚಿಸಲಾಗಿ ಸದರಿ ಪಾದಚಾರಿ ಮಾರ್ಗದಲ್ಲಿ ಕಾಬಲ್‌ಸ್ಟೋನ್‌ಗಳನ್ನು ಅಳವಡಿಸುವ ಕೆಲಸವು ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ನಿರ್ವಹಿಸಿದ್ದು ಇದನ್ನು ಸರಿಪಡಿಸಲು ಸಂಬಂಧಿಸಿದ ಸಹಾಯಕ ಅಭಿಯಂತರರಾದ ಶ್ರೀಮತಿ.ಸುಮಾ ರವರನ್ನು ಸಂಚಾರಿ ದೂರವಾಣಿ ಮೂಲಕ ಕೋರಲಾಗಿ ಸದರಿಯವರು ಇದನ್ನು ಶೀಘ್ರವೇ ಸರಿಪಡಿಸಲಾಗುವುದೆಂದು ಭರವಸೆ ನೀಡಿರುವುದನ್ನು ಸಭೆಗೆ ತಿಳಿಸಲಾಯಿತು.

ನಂತರ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಎಲ್ಲಾ ಸದಸ್ಯರುಗಳು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಉದ್ಯಾನವನಗಳು ಹಾಗೂ ಐಲ್ಯಾಂಡ್‌ಗಳಲ್ಲಿ ಖಾಲಿ ಇರುವ ಜಾಗಗಳಲ್ಲಿ ಪಾರಿವಾಳಗಳಿಗೆ ಆಹಾರ ಧಾನ್ಯಗಳನ್ನು ಹಾಕುತ್ತಿರುವುದರಿಂದ ಪಾರಿವಾಳಗಳ ಸಂಖ್ಯೆ ಜಾಸ್ತಿಯಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮವುಂಟಾಗುತ್ತಿದ್ದು, ಇದನ್ನು ತಡೆಗಟ್ಟಲು ಸೂಕ್ತ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಚರ್ಚಿಸಲಾಗಿ ಉದ್ಯಾನವನಗಳಲ್ಲಿ ಹಾಗೂ ಐಲ್ಯಾಂಡ್‌ಗಳಲ್ಲಿ ಖಾಲಿ ಇರುವ ಜಾಗಗಳಲ್ಲಿ ಗಿಡಗಳನ್ನು ನೆಡುವ ಮೂಲಕ ಸದರಿ ಜಾಗಗಳಲ್ಲಿ ಪಾರಿವಾಳಗಳಿಗೆ ಆಹಾರ ಧಾನ್ಯಗಳನ್ನು ಹಾಕಲು ಜಾಗವಿಲ್ಲದಂತೆ ಮಾಡಿದರೆ ಇದನ್ನು ತಡೆಗಟ್ಟಬಹುದೆಂದು ಚರ್ಚಿಸಿ ತೀರ್ಮಾನಿಸಲಾಯಿತು. ಆದುದರಿಂದ ಸದರಿ ಸ್ಥಳಗಳಲ್ಲಿ ಗಿಡಗಳನ್ನು ನೆಡಲು ಸಂಬಂಧಿಸಿದ ತೋಟಗಾರಿಕೆ ಅಧೀಕ್ಷಕರು ಬಿಬಿಎಂಪಿ ರವರನ್ನು ಕೋರಲಾಗುವುದೆಂದು ನೋಡಲ್ ಅಧಿಕಾರಿಗಳು ತಿಳಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| 8/7/2021. | 8/7/21 |
| ಕಾರ್ಯದರ್ಶಿಗಳು ಹಾಗೂ | ನೋಡಲ್ ಅಧಿಕಾರಿಗಳು |
| ಸಹಾಯಕ ಅಭಿಯಂತರರು | ವಾರ್ಡ್ ಸಂಖ್ಯೆ: 143 ಹಾಗೂ |
| ವಾರ್ಡ್ –143 ವಿ. ವಿ.ಪುರಂ | ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) |

Scanned by CamScanner